ಇ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಬಾಕಿ ಇರುವ ಎಲ್ಲಾ 29 ಅರ್ಜಿಗಳಿಗೂ ಮಾರ್ಚ್ 1991ರ ಅಂತ್ಯದ ಒಳಗೆ ವಿದ್ಯುತ್ ಪೂರೈಸಲಾಗುವುದು. ಕಲಘಟಗಿ ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ ಅರ್ಜಿಗಳ ಪೈಕಿ 120 ಅರ್ಜಿಗಳಿಗೆ ಮಾರ್ಚ್ 1991ರ ಅಂತ್ಯದ ಒಳಗೆ ವಿದ್ಯುತ್ ಪೂರೈಸಲಾಗುವುದು. ಹಾಗೂ ವಾರ್ಷಿಕ ಗುರಿಯನ್ನು ಸಾಧಿಸಲಾಗುವುದು. ಬಾಕಿ ಉಳಿದಿರುವ ಅರ್ಜಿಗಳಿಗೆ 1991-92ನೇ ಸಾಲಿನ ಮೊದಲ ಕೆಲವು ತಿಂಗಳುಗಳಲ್ಲಿ ವಿದ್ಯುತ್ ಒದಗಿಸಲಾಗುವುದು.

ಈ) ಕಲಘಟಗಿಯಲ್ಲಿ ಮಂಡಳಿಯ ಉಪ ವಿಭಾಗವನ್ನು ಸ್ಥಾಪಿಸುವ ವಿಷಯವು ಮಂಡಳಿಯ ಪರಿಶೀಲನೆಯಲ್ಲಿದೆ.

ಉ) 'ಈ'ನಲ್ಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ತಾಲ್ಲೂಕು ಅರಳಿಕಟ್ಟೆ ಸಿರಗುಪ್ಪಿ ಗ್ರಾಮಗಳಲ್ಲಿ ವಿದ್ಯುತ್ ಮಂಡಲಿಯ ಸೆಕ್ಷನ್ ಆಫೀಸ್ ಪ್ರಾರಂಭ

1625 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ತಾಲ್ಲೂಕಿನ ಅರಳಿಕಟ್ಟೆ ಮತ್ತು ಸಿರಗುಪ್ಪಿ ಗ್ರಾಮಗಳಲ್ಲಿ ಸೆಕ್ಷನ್ ಆಫೀಸ್ ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಹಾಗಿದ್ದಲ್ಲಿ ಮೇಲ್ಕಂಡ ಎರಡೂ ಗ್ರಾಮಗಳಲ್ಲಿ ಯಾವಾಗ ಸೆಕ್ಷನ್ ಆಫೀಸ್ ಗಳನ್ನು ಪ್ರಾರಂಭಿಸಲಾಗುವುದು.*

ಇ) *ಹುಬ್ಬಳ್ಳಿ ಮತ್ತು ಕಲಘಟಗಿ ತಾಲ್ಲೂಕಿನಲ್ಲಿ ಲೈನ್‌ಮನ್‌ಗಳ ಕೊರತೆಯಿರುವುದು ನಿಜವಲ್ಲವೇ?*

ಈ) *ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹುಬ್ಬಳ್ಳಿ ತಾಲ್ಲೂಕಿನ ಅರಳಿಕಟ್ಟೆಯಲ್ಲಿ ಸೆಕ್ಷನ್ ಆಫೀಸ್ ಪ್ರಾರಂಭಿಸುವ ವಿಚಾರ ಪರಿಶೀಲನೆಯಲ್ಲಿದೆ. ಆದರೆ ಸಿರಗುಪ್ಪಿಯಲ್ಲಿ ಸೆಕ್ಷನ್ ಆಫೀಸ್ ಪ್ರಾರಂಭಿಸುವ ವಿಷಯ ಪರಿಶೀಲನೆಯಲ್ಲಿಲ್ಲ.

ಆ) 'ಅ' ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) 'ಇ'ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಸೇಡಂ ತಾಲ್ಲೂಕಿನ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿ ಕಡಿತ.

1630 - ಶ್ರೀ ಬಸವರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಪ್ರತಿದಿನ ಹಗಲಿನಲ್ಲಿ ಕಡಿತ ಮಾಡುವುದರಿಂದ ಗ್ರಾಮಾಂತರ ರೈತಾಪಿ ಜನರು ನೀರಿಗಾಗಿ ಹಾಗೂ ಸಣ್ಣ ಕೈಗಾರಿಕೋದ್ಯಮಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಸರಿಯಾಗಿ ವಿದ್ಯುಚ್ಛಕ್ತಿ ಕೊಡುವ ವ್ಯವಸ್ಥೆ ಮಾಡಿ ರೈತರಿಗೆ ಹಾಗೂ ಸಣ್ಣ ಕೈಗಾರಿಕೋದ್ಯಮಿಗಳ ಮಾಲೀಕರಿಗೆ ನಷ್ಟವಾಗದಂತೆ ಮಾಡಲು ವ್ಯವಸ್ಥೆ ಮಾಡುವರೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ರಾಜ್ಯಾದ್ಯಂತ ಬೇಸಿಗೆಯ ತಿಂಗಳುಗಳಲ್ಲಿ ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುತ್ ಬಳಕೆಯ ಪ್ರಮಾಣ ಬಹಳ ತೀವ್ರವಾಗಿದೆ. ಆದುದರಿಂದ ಬೇಡಿಕೆಯನ್ನು ಲಭ್ಯತೆಗೆ ಸೀಮಿತಗೊಳಿಸಲು ಮಂಡಳಿಯು 22.12.1990ರಿಂದ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಹಗಲಿನಲ್ಲಿ ಪ್ರತಿದಿನ 6 ಗಂಟೆಗಳ ಕಾಲ ನಿಯಮಿತ ಲೋಡ್ ಷೆಡ್ಡಿಂಗ್ ಜಾರಿಗೆ ತಂದಿದೆ.

ಸೇಡಂ ತಾಲ್ಲೂಕಿನಲ್ಲೂ ಸಹ 6 ಗಂಟೆಗಳ ನಿಯಮಿತ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸಲಾಗುತ್ತಿದೆ. ಆದರೆ ಶೇಕಡ 60ಕ್ಕೂ ಹೆಚ್ಚಿನ ಕೈಗಾರಿಕೆ ಲೋಡ್ ಇರುವ ಫೀಡರ್‌ಗಳನ್ನು ಈ ನಿಯಮಿತ ಲೋಡ್ ಷೆಡ್ಡಿಂಗ್‌ನಿಂದ ವಿನಾಯತಿಗೊಳಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ನಿಯಮಿತ ಲೋಡ್ ಷೆಡ್ಡಿಂಗ್ ಅನಿವಾರ್ಯವಾಗಿದೆ.

ಆ) ಸೇಡಂ ತಾಲ್ಲೂಕಿನಲ್ಲಿ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಮಾಡಲು ಮಂಡಳಿಯು ಶಹಬಾದ್‌ನಿಂದ ಕುರುಕಂಟಾವರೆಗೆ ಹಾಲಿ ಇರುವ 110 ಕೆ.ವಿ.ಲೈನನ್ನು ಸೇಡಂವರೆಗೆ ವಿಸ್ತರಿಸಲು ಉದ್ದೇಶಿಸಿದೆ. ಮತ್ತು ಸೇಡಂನಲ್ಲಿ 10 ಎಂ.ವಿ.ಎ. ಸಾಮರ್ಥ್ಯದ ಎರಡು ಟ್ರಾನ್ಸ್ ಫಾರ್ಮರ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಅಲ್ಲದೆ ವಿಶ್ವ ಬ್ಯಾಂಕಿನ ಆರ್ಥಿಕ ನೆರವಿನೊಡನೆ ಸೇಡಂನಲ್ಲಿ 220 :110 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ತಲಾ 100 ಎಂ.ವಿ.ಎ. ಸಾಮರ್ಥ್ಯದ ಎರಡು ಟ್ರಾನ್ಸ್ ಫಾರ್ಮರ್‌ಗಳೊಡನೆ ಸ್ಥಾಪಿಸಲು ಉದ್ದೇಶಿಸಿದೆ.

ಸೇಡಂ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ

1629 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬಾಗ್‌ಧಾರಿ ರಿಬ್ಬನ್‌ಪಲ್ಲಿ ರಸ್ತೆಯ ಹಾಗೂ ಸೇಡಂ ಕೊಡ್ಲಾ ರಸ್ತೆ ಕೆಲಸ ಪ್ರಾರಂಭ ಮಾಡಿಲ್ಲವೇಕೆ?

ಆ) ಮಲಖೇಡ್‌ದಿಂದ ರಿಬ್ಬನ್‌ಪಲ್ಲಿಯವರೆಗೆ 2 ಹಂತಗಳಲ್ಲಿ ಟೆಂಡರ್‌ಗಾಗಿ ಇಟ್ಟಿದ್ದ ಹಣ ಎಷ್ಟು?

ಇ) ಈ ರಸ್ತೆಗಳ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಈ) ಈ ಹಣಕಾಸು ಸಾಲಿನಲ್ಲಿ ಕೆಲಸವನ್ನು ಮಾಡದಿದ್ದರೆ ಈ ಹಣ ಲ್ಯಾಪ್ಸ್ ಆಗುವುದಿಲ್ಲವೇ?

ಉ) ಈ ಸದ್ಯದ ಪರಿಸ್ಥಿತಿಯಲ್ಲಿ ಕೊರಕಲು ಬಿದ್ದು ಬಸ್ಸುಗಳ ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ ದುರಸ್ತಿ ವ್ಯವಸ್ಥೆಗಾಗಿ ಹಣ ಏನಾದರೂ ಮಂಜೂರು ಮಾಡಬಹುದೆ?

ಊ) ಇಲ್ಲಿಯವರೆಗೆ ಈ ರಸ್ತೆಗಳ ಮೇಲೆ ಮಲಖೇಡ್‌ನಿಂದ ರಿಬ್ಬನ್ ಪಲ್ಲಿಯವರೆಗೆ ಸೇಡಂನಿಂದ ಕೊಡ್ಲಾವರೆಗೆ ಮಲಖೇಡ್‌ನಿಂದ ರಾಜಶ್ರೀ ಸಿಮೆಂಟ್ ಸಿಮೆಂಟ್ ಕಾರ್ಖಾನೆ ಕ್ರಾಸಿನವರೆಗೆ ಖರ್ಚಾದ ಹಣವೆಷ್ಟು?

ಋ) ಈಗಲಾದರೂ ಸಹ ಇದರ ರಿಪೇರಿ ಸಧ್ಯದಲ್ಲೇ ಮಾಡಿಸಿ ಸಂಚಾರ ತೊಂದರೆ ನಿವಾರಿಸಬಹುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):